ಹೊಂದಾಣಿಕೆ ಕೆಲಸ (reconciliation) ಪ್ರಗತಿಯಲ್ಲಿದ್ದು, 517 ಬಾಂಡ್‌ಗಳನ್ನು ಭಾರತೀಯ ಜೀವ ವಿಮಾ ನಿಗಮದವರು ಮುದ್ರಿಸಿ ವಿತರಿಸಲು ಕ್ರಮ ಕೈಗೊಳ್ಳುತ್ತಿದೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ: ಮಾನ್ಯ ಅಧ್ಯಕ್ಷರೆ, LIC ಯಿಂದ ಹಣ ನೀಡಲಾಗಿದೆಯೇ, ಇಲ್ಲವೇ ಎಂಬ ಮಾಹಿತಿಯನ್ನು ಕೇಳಬಯಸುತ್ತೇನೆ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಈಗಾಗಲೇ ಈ ವಿಚಾರವಾಗಿ ಬಾಂಡ್‌ಗಳು ಬಂದಿಲ್ಲದಿರುವ ಪ್ರಸಂಗ ಕಂಡುಬಂದಿರುವುದರಿಂದ ಸರಿಪಡಿಸುವುದಕ್ಕೋಸ್ಕರ reconciliation ಪ್ರಗತಿಯಲ್ಲಿದೆ. 517 ಬಾಂಡ್‌ಗಳನ್ನು ಅತಿ ಶೀಘ್ರದಲ್ಲಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಡಾ: ಬಗಲಿ ಸಾರ್ವಭೌಮ ಸಾತಗೌಡ: ಸರ್ಕಾರ ಇನ್ನೂ LIC ಗೆ ಹಣವನ್ನೇ ಕೊಟ್ಟಿಲ್ಲ. ಅದಕ್ಕಾಗಿ ತಡವಾಗುತ್ತಿದೆ. ಅದಕ್ಕಾಗಿ ಸರ್ಕಾರ ಹಣ ಕೊಟ್ಟಿದೆಯೋ, ಇಲ್ಲವೋ ಎನ್ನುವ ಬಗ್ಗೆ I want specific answer.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಹಣಕಾಸಿನ ಬಿಡುಗಡೆಗೆ ಯಾವುದೇ ತೊಂದರೆ ಇಲ್ಲ. ಆಯವ್ಯಯದಲ್ಲಿ ಹಣಕಾಸಿನ ಲಭ್ಯತೆ ಇದೆ.

ಸೇಡಂ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆಯ ಬಗ್ಗೆ

60(364) ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನ ರಂಜೋಳ ಮತ್ತು ಆಡಕಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ ಮಾಡುವುದು ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರಕಾರ ಕೈಕೊಂಡಿರುವ ಕ್ರಮವೇನು?

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 2001 ರ ಜನಗಣತಿಯನ್ವಯ ಸೇಡಂ ತಾಲ್ಲೂಕಿನ ಜನಸಂಖ್ಯೆಯು 2,27,600 ಇದ್ದು. ಮಾರ್ಗಸೂಚಿಗಳನ್ವಯ 7 ಪ್ರಾಥಮಿಕ

ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗಿದ್ದು, ಈಗಾಗಲೇ ಅಲ್ಲಿ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಸೇಡಂ ತಾಲ್ಲೂಕಿಗೆ ಇನ್ನೂ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: 2001ರ Census ಪ್ರಕಾರ ಅದು ಈಗ 7 ಮಾಡಬೇಕಾಗಿತ್ತು 8 ಮಾಡಿದ್ದಾರೆ. 2010ರಲ್ಲಿದ್ದೇವೆ ಎನ್ನುವುದನ್ನು ಮಾನ್ಯ ಸಚಿವರು ಮರೆತಿದ್ದಾರೆಂದೆನಿಸುತ್ತದೆ. ಈಗ ಹೊಸ census ನಡೆಯುತ್ತಿದೆ. 2001 ಎಂದರೆ ಇಲ್ಲಿಗೆ 10 ವರ್ಷಗಳಾಯಿತು. Always you think forward. 2010 ರಲ್ಲಿ ಇನ್ನೂ census complete ಆಗಿಲ್ಲ ಆದರೆ, projected population ಇರುತ್ತದೆ. ಆ projected population ನೋಡಿ, ಅವಶ್ಯಕತೆ ಇದೆ ಎಂದು ನಿಮಗೆ ಗೊತ್ತಿದೆ. ಆದರೆ, ಯಾರೋ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದು ಮಾನ್ಯ ಸಚಿವರು ಇಲ್ಲಿ ಒಂದು ರೀತಿ ಉತ್ತರ ಕೊಟ್ಟರೆ ನಾವು ಜನರಿಗೆ ಏನು ಹೇಳಬೇಕು? ಮಾನ್ಯ ಸಚಿವರು 2011ರ census ಪ್ರಕಾರ ನಾವು ಮಾಡಿಕೊಡುತ್ತೇವೆಂದು ಮಾತು ಕೊಡಬೇಕು. ಅದು ಬಿಟ್ಟು 2001ರ ವಿಷಯ ಈಗ ಹೇಳಿದರೆ ಏನು ಹೇಳುವುದು?

ಶ್ರೀ ಬಿ ಶ್ರೀರಾಮುಲು: 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿವೆ. 2001 ಜನಗಣತಿ ಪ್ರಕಾರ ಮಾಡಿದ್ದು ಈಗ ಜನಸಂಖ್ಯೆ ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಪ್ರಾಯಶ: ಅದಷ್ಟು ಬೇಗನೆ ಮಾನ್ಯ ಸದಸ್ಯರು ಒಂದು ಮನವಿ ಪತ್ರ ಕೊಟ್ಟರೆ ವ್ಯವಸ್ಥೆ ಮಾಡಿ ಕೊಡುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಂಕ 1-7-2010 4ನೇ ಪಟ್ಟಿಯಿಂದ ಲಿಖಿತ